ಇಂದು ದಿನಾಂಕಃ23.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನಾನು ಬಿ ಎಸ್ ಸಿ., ಬಿ ಎಡ್ ಪದವೀದರನಾಗಿರುತ್ತೇನೆ. ನನಗೆ ಮದುವೆಯಾಗಿದ್ದು ಇಬ್ಬರು ಮಕ್ಕಳು ಇರುತ್ತಾರೆ. ಚಾಸಾ-1 ನನ್ನ ಅಣ್ಣನ ಮಗಳು. ನಾವು 8 ಜನ ಅಣ್ಣ ತಮ್ಮಂದಿರು ಇರುತ್ತೇವೆ. ಈಗ ಸುಮರು 4 ವರ್ಷಗಳಿಂದ ನಾವು ಪ್ರತ್ಯೇಕವಾಗಿ ವಾಸಮಾಡುತ್ತಿದ್ದೇವೆ. ನಾವು ಜಂಟಿ ಕುಟುಂಬದಲ್ಲಿ ಇದ್ದಾಗ ನಮ್ಮ ಮನೆಯ ಹಿರಿತನವನ್ನು ನಮ್ಮ ತಂದೆ ಮಾಡುತ್ತಿದ್ದು, ನಂತರ ನಮ್ಮ ತಾಯಿ, ನಂತರ ನಮ್ಮ ಹಿರಿಯ ಅಣ್ಣ ಮಾಡುತ್ತಿದ್ದರು. ಚಾಸಾ-1 ಹಾಗೂ 1ನೇ ಆರೋಪಿಯ ಮದುವೆಯ ಸಮಯದಲ್ಲಿ ನಾವು ವಿಬಾಗಗೊಂಡಿದ್ದೆವು. ಮದುವೆಯ ಸಮಯದಲ್ಲಿ ನಮ್ಮ ಅಣ್ಣ ನಮ್ಮ ಮನೆಯಿಂದ 900 ಮೀಟರ್ ನಷ್ಟು ದೂರದಲ್ಲಿ ಅವರ ಮನೆ ಇತ್ತು. ಸಾಕ್ಷಿಯು ಮುಂದುವೆರದು ಚಾಸಾ-1 ರವರ ಮದುವೆ ನಮ್ಮ ಮನೆಯಲ್ಲಿಯೇ ನಡೆದಿರುತ್ತದೆ. ಚಾಸಾ-1 ರವರ ಮದುವೆಯ ಉಸ್ತುವಾರಿಯನ್ನು ನಾನೇ ತೆಗೆದುಕೊಂಡಿದ್ದು ಹಣಕಾಸಿನ ವ್ಯವಹಾರವನ್ನು ನಾನು ಮತ್ತು ನನ್ನ ಅಣ್ಣಂದಿರು ಕೂಡಿ ಮಾಡಿರುತ್ತೇವೆ. ಆರೋಪಿಗೆ ಬಂಗಾರ ಮತ್ತು ಹಣವನ್ನು ಚಾಸಾ-1 ರವರ ತಂದೆ ನೀಡಿರುತ್ತಾರೆ. ಆ ರೀತಿ ಹಣ ಖರ್ಚು ಮಾಡಿರುವ ಬಗ್ಗೆ ನಮ್ಮ ಬಳಿ ಯಾವುದೇ ರಶೀದಿಗಳು ಇರುವುದಿಲ್ಲ.

2. ಚಾಸಾ-1 ರವರ ಮದುವೆಯ 15-20 ವರ್ಷಗಳ ಪೂರ್ವದಲ್ಲಿ ನಾವು ವಿಬಾಗ ಗೊಂಡಿದ್ದೆವು. ಚಾಸಾ-1 ಹಾಗೂ ಆರೋಪಿತರ ನಡುವೆ ಸುಮಾರು 15-20 ಬಾರಿ ರಾಜೀ ಸಂದಾನಗಳು ಅಂಜುಮನ್ ಸಂಸ್ಥೆಯಲ್ಲಿ, ನಮ್ಮ ಮನೆಯಲ್ಲಿ, ಚಿಕ್ಕೇರೂರನಲ್ಲಿ ನಡೆದಿರುತ್ತವೆ. ನಾವು ಎಷ್ಟು ಬಾರಿ ಪಂಚಾಯತಿಯನ್ನು ಕೂರಿಸಿದೆವು ಅವರು ಎಷ್ಟು ಬಾರಿ ಪಂಚಾಯತಿಯನ್ನು ಕೂರಿಸಿದರು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ದಿನಾಂಕ 30-01-2016 ರಂದು 1ನೇ ಆರೋಪಿಗೆ, 2 ಮತ್ತು 3 ನೇ ಆರೋಪಿತರು ಚಾಸಾ-1 ರವರ ಮನೆಗ ಹೋಗಿ 1ನೆ ಆರೋಪಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈಯ್ದುರಿರುತ್ತಾರೆ ಎಂದು ಈ ಮೊದಲು ಸಾಕ್ಷ ನುಡಿದಾಗ ನನಗೆ ಆರೋಪಿತರು ಎಂಬುದನ್ನು ಕನ್ ಫ್ಯೂಸ್ ಮಾಡಿಕೊಂಡಿದ್ದರಿಂದ ಹಾಗೆ ಹೇಳಿರುತ್ತೇನೆ ಆದರೆ ನಿಜಸ್ಥಿತಿ 1ನೇ ಆರೋಪಿಯೇ ನನ್ನ ಅತ್ತಿಗಗೆ ಕರೆ ಮಾಡಿ ನಿನ್ನ ಮಗಳನ್ನು ಕೊನೆ ಬಾರಿ ನೋಡಿಕೊಂಡು ಹೋಗ ಬಾಗಿ ಅವಳನ್ನು ಸುತ್ತು ಸುಟ್ಟುಹಾಕುತ್ತಿದ್ದೇವೆ ಎಂದು 1ನೇ ಆರೋಪಿ ಹೇಳಿರುತ್ತಾರೆ. ಆ ರೀತಿ ಆರೋಪಿ ಹೇಳಿದ ವಿಚಾರವನ್ನು ನನ್ನ ಅಣ್ಣನಾದ ಚಾಸಾ-6 ರವರು ತಿಳಿಸಿರುತ್ತಾರೆ. ಆಗ ಸಮಯ ಬೆಳಿಗ್ಗೆ 9.30 ರಿಂದ 10 ಗಂಟೆಯಾಗಿತ್ತು. ಕರೆ ಆ ದಿನದ ಬೆಳಿಗ್ಗೆ 9 ರಿಂದ 10 ಗಂಟೆಯ ಒಳಗೆ ಬಂದಿತ್ತು ಎಂದು ಹೇಳಿರುತ್ತಾರೆ.

2. ಆ ದಿನದಂದು ನಾನು ಮನೆಯನ್ನು 10 ಗಂಟೆಗೆ ಬಿಟ್ಟು ಕಾರಿನಲ್ಲಿ ನಾನು, ನನ್ನ ಅತ್ತಿಗೆ ಹಾಗೂ ನಮ್ಮ ಅಣ್ಣ ಚಿಕ್ಕೇರೂರಗೆ ಹೋಗಿರುತ್ತೇವೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಕಾರು ನನ್ನ ಸ್ವಂತ ಕಾರು ಆಗಿರುತ್ತದೆ. ಆ ದಿನ ನಾವು ಚಾಸಾ-1 ರವರ ಮನೆಗೆ ಬಂದಿರುತ್ತೇವೆ. ಆಗ ಅಲ್ಲಿ ಆರೋಪಿತರು ಇದ್ದರು. ಆ ದಿನ ನಾವು ಚಾಸಾ-1 ರವರ ಮನೆಯ ಬಳಿ ಹೋದಾಗ ಎಲ್ಲರೂ ಮನೆಯ ಒಳಗಡೆ ಇದಿದ್ದು ನಾವು ಹೋದ ತಕ್ಷಣ 1ನೇ ಆರೋಪಿ ಮತ್ತು ಆತನ ತಂದೆ ತಾಯಿ ಹಾಗೂ ಅವರ ತಮ್ಮ ಹೊರಗೆ ಬಂದಿರುತ್ತಾರೆ. ನಂತರ ಗಲಾಟೆ ಮನೆಯ ಎದುರಿಗೆ ಆಗಿರುತ್ತದೆ.

3. ಚಾಸಾ-1 ರವರನ್ನು 1ನೇ ಆರೋಪಿ ಗೋಡೆಗೆ ಜಜ್ಜಿದಾಗ ರಕ್ತ ಬಂದಿರುವುದಿಲ್ಲ. ಆಗ ಜನ ಸೇರಿದ್ದರು. ಆಗ ಸುಮಾರು 10-15 ಜನ ಸೇರಿದ್ದರು. ಆಗ ಸಮಯ 12 ಗಂಟೆಯಾಗಿತ್ತು. ಚಿಕ್ಕೇರೂರನಿಂದ ಹಿರೇಕರೂರು 12 ಕಿ ಮೀ ದೂರದಲ್ಲಿ, ಹಂಸಬಾವಿ 8 ಕಿ ಮೀ ದೂರದಲ್ಲಿ ಇರತ್ತದೆ. ಎರಡು ಕಡೆ ವಾಹನಗಳ ವ್ಯವಸ್ಥೆ ಇದೆ. ಚಾಸಾ-1 ರವರನ್ನು ಅಂಬ್ಯೂಲೆನ್ಸನಲ್ಲಿ ಕರೆದುಕೊಂಡು ಹೋದೆವು. ನನ್ನ ಕಾರಿನಲ್ಲಿ ಎಲ್ಲರನ್ನು ಕರೆದುಕೋಂಡು ಹೋಗಲು ಸಾದ್ಯವಾಗುವುದಿಲ್ಲ ಹಾಗೂ ಚಾಸಾ-1 ರವರು ಪ್ರಜ್ಞೆ ತಪ್ಪಿ ಬಿದಿದ್ದ ಕಾರಣದಿಂದ ನಾವು ಅವರನ್ನು ಅಂಬುಲೆನ್ಸನಲ್ಲಿ ಕರೆದುಕೊಂಡು ಹೋಗಿದ್ದೆವು. ಚಿಕ್ಕೇರೂರಿನ ಪೋಲಿಸರು ಕರೆ ಮಾಡಿ ಅಂಬೂಲೆನ್ಸನ್ನು ಕರೆಸಿರುತ್ತಾರೆ. ಆ ದಿನ ಅಂಬ್ಯೂಲನ್ಸ ಎಷ್ಟ ಗಂಟೆಯ ಸಮಯಕ್ಕೆ ಬಂದಿತು ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಚಿಕ್ಕೇರೂರ ಬಿಟ್ಟಾಗ ಸಮಯ ಎಷ್ಟಾಗಿತ್ತು ಎಂದು ಹೇಳಲು ಆಗುವುದಿಲ್ಲ. ಆ ದಿನದಂದು ಚಾಸಾ-1 ರವರ ಜೊತೆ 1ನೇ ಆರೋಪಿ ಹಾಗು ಚಾಸಾ-1 ರವರ ತಾಯಿ ಹೋಗಿರುತ್ತಾರೆ. ಚಾಸಾ-1 ರವರು ಪ್ರಜ್ಞೆ ತಪ್ಪಿ ಬಿದ್ದ ತಕ್ಷಣ ಪೋಲಿಸರು ಅಂಬುಲೆನ್ಸಗೆ ಕರೆ ಮಾಡಿರುತ್ತಾರೆ. ಕರೆ ಮಾಡಿ ಎಷ್ಟು ಸಮಯದ ನಂತರ ಅಂಬುಲೆನ್ಸ ಬಂದಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ.

4. ದಿನಾಂಕ 30-01-2016 ರಂದು ನಾನು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಂತರ ಅದೇ ದಿನ ನಮ್ಮ ಊರಿಗೆ ಹೋಗಿರುತ್ತೇನೆ. ಪಂಚನಾಮೆಯನ್ನು ಮಾಡುವ ಸಲುವಾಗಿ ಘಟನೆ ನಡೆದ ನಂತರ ದಿನಾಂಕ 01-02-2016 ರಂದು ಪೋಲಿಸರು ನನ್ನನ್ನು ಕರೆಸಿರುತ್ತಾರೆ. ಆಗ ನಾನು ಠಾಣೆಗೆ 11.30 ಗಂಟೆಯ ಸಮಯಕ್ಕೆ ಬಂದಿರುತ್ತೇನೆ. ಪಂಚನಾಮೆಗಳನ್ನು ಮಾಡುವಾಗ ನಾನು, ಚಾಸಾ-1, ಚಾಸಾ-2 ಹಾಗೂ ಪೋಲಿಸರು ಇದ್ದೆವು. ಅವರನ್ನು ಹೊರತುಪಡಿಸಿ ಆರೋಪಿತರು ಸ್ಥಳದಲ್ಲಿ ಇದ್ದರು. ಪಂಚನಾಮೆಗಳಿಗೆ ಅವುಗಳನ್ನು ಮಾಡಿದ ಸ್ಥಳಗಳಲ್ಲಿ ಸಹಿ ಮಾಡಿರತುತ್ತೇನೆ. ಸದರಿ ದಾಖಲೆಗಳಲ್ಲಿ ಪೋಲಿಸರು ಬರೆದಿದ್ದರು. ಸಾಕ್ಷಿಯು ಮುಂದುವರೆದು ಠಾಣೆಯಲ್ಲಿ ಮಾರನೇ ದಿನ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಅವುಗಳಲ್ಲಿ ಯಾವುದು ಠಾಣೆಯಲ್ಲಿ ಯಾವುದು ಸ್ಥಳದಲ್ಲಿ ಮಾಡಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ದಾಖಲೆಗಳನ್ನು ಬರೆಯಲು ಕೆಲವು ಮಾಹಿತಿಗಳನ್ನು ನಾನು ನೀಡಿರುತ್ತೇನೆ. ಚಾಸಾ-1 ರವರಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ಈ ದೂರನ್ನು ದಾಖಲಿಸುವ ಪೂರ್ವದಲ್ಲಿ ಆರೋಪಿತರು ಚಾಸಾ-1 ರವರಿಗೆ ಹಿಂಸೆ ಮಾಡುತ್ತಿದ್ದ ಬಗ್ಗೆ ನಮಗೆ ದೂರನ್ನು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ-1 ರವರು ಹಬ್ಬಕ್ಕೆ ಎಂದು ತನ್ನ ತವರು ಮನೆಗೆ ಹೋಗುವಾಗ 2 ನೇ ಆರೋಪಿಗೆ ಸೇರಿದ ನಿವೃತ್ತಿ ಹಣವನ್ನು ತೆಗೆದುಕೊಂಡು ಹೋಗಿದ್ದು, ಅದನ್ನು ವಾಪಸ್ಸು ಕೇಳಿದಾಗ ನಾವು ಈ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ಬಾಸೂರು ಎಂಬುವವರ ಮನೆ ಬಳಿ ಬಳೆ ಒಡೆದುಕೊಂಡು ಅದರಿಂದ ಗಾಯ ಮಾಡಿಕೊಂಡು ಈ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳುಳ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.